ಸಬ್ಸಿಡಿಗೆ ಸಿಗುವಂಥ ವ್ಯವಸ್ಥೆ ಮಾಡಬೇಕಾಗಿತ್ತು. ಅದೇನೋ ದೊಡ್ಡ ಉಪಕಾರವಲ್ಲ. ಆದ್ದರಿಂದ ಏನು ಉಪಯೋಗವಿಲ್ಲ. ಆ ಸರ್ಟಿಫೈಡ್ ಸೀಡ್ಸ್‌ಗಳನ್ನು ಖರೀದಿ ಮಾಡುವಂಥ ಸಂದರ್ಭದಲ್ಲಿ ಗೋಲ್‌ಮಾಲ್ ಆಗಿ, ಅವ್ಯವಸ್ಥೆಯಾಗಿ ಮೋಸ ಆಗುತ್ತಿರುವಂಥ ಈ ಸಂದರ್ಭದಲ್ಲಿ ಒಂದು ಸರ್ಕಾರ ಎಂದು ಬದುಕಿದ್ದು ನೀವು ಸಮಯಕ್ಕೆ ಸರಿಯಾಗಿ ಆ ಬಿತ್ತನೆ ಬೀಜಕ್ಕೆ 50 ಪರ್ಸೆಂಟ್ ಸಬ್ಸಿಡಿ ಕೊಡಲಿಕ್ಕೆ ಆಗಲಿಲ್ಲ ಎನ್ನುವುದಾದರೆ ಹೇಗೆ?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) :– ಮಾನ್ಯ ಅಧ್ಯಕ್ಷರೆ, ಹೋದ ಸಾರಿ ಆಯವ್ಯಯದಲ್ಲಿ ನಮ್ಮ ಉಪಮುಖ್ಯಮಂತ್ರಿಗಳು ಬಿತ್ತನೆ ಬೀಜಕ್ಕೆ 25 ಪರ್ಸೆಂಟ್ ಸಬ್ಸಿಡಿ ಎಂದು ಡಿಕ್ಲೇರ್ ಮಾಡಿದ್ದರು.

ಶ್ರೀ ಜೆ.ಸಿ. ಮಾಧುಸ್ವಾಮಿ :– ಮಾನ್ಯ ಅಧ್ಯಕರೆ, I am on a point of order ಈಲ್ಡ್ ಆಗಬಹುದು; ನಿಲುವಳಿ ಸೂಚನೆಯಲ್ಲಿ ಇವರು ಮಧ್ಯೆ ಪ್ರವೇಶಿಸಬಾರದು.

ಶ್ರೀ ಕೆ. ಶ್ರೀನಿವಾಸಗೌಡ :– ಅವರೇ ಈಲ್ಡ್ ಆದ ಮೇಲೆ ನೀವು ಏಕೆ ಸ್ವಾಮಿ? ವಿರೋಧ ಪಕ್ಷದ ನಾಯಕರೇ ಈಲ್ಡ್ ಆಗಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಅವರು ಈಲ್ಡ್ ಆಗಬಹುದು, ಕಾನೂನು ಬೇರೆ ಸಾರ್, ಒಬ್ಬ ಮಂತ್ರಿಗಳು ಕೇಳಿದ ತಕ್ಷಣ ಈಲ್ಡ್ ಆದರೆ ತಪ್ಪು ಎಂದು ಹೆಳುವುದಕ್ಕಾಗುತ್ತದೆಯೇ?

ಶ್ರೀ ಕೆ. ಶ್ರೀನಿವಾಸಗೌಡ :– ಮಾನ್ಯ ವಿರೋಧ ಪಕ್ಷದ ನಾಯಕರೇ ಈಲ್ಡ್ ಆಗಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಸ್ವಾಮಿ This is adjournment motion that we are discussing. He cannot interfere now.

(x) ಶ್ರೀ ಕೆ. ಶ್ರೀನಿವಾಸಗೌಡ :– ಹೌದು ಮಧ್ಯದಲ್ಲಿ ನಾವು ಮಾತನಾಡಬೇಕಾಗುತ್ತದೆ.

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಈಗೇನು ದೀರ್ಘವಾಗಿ ಪ್ರಿಲಿಮಿನರಿ ಸಬ್‌ಮಿಷನ್ ಮಾಡಿದಿರಿ ಅದನ್ನು ಆಲಿಸಿದ್ದೇನೆ. ದಯಮಾಡಿ ನನ್ನ ಮಾತನ್ನು ತಾವು ಕೇಳಿ ತಾವು ಮತ್ತು ತಮ್ಮ ಸ್ನೇಹಿತರು ಹಾಗೂ ವಿವಿಧ ಪಕ್ಷಗಳ ಮುಖಂಡರು ಸೇರಿ ಏನು ನಿಲುವಳಿ ಸೂಚನೆ ಕೊಟ್ಟಿದ್ದಿರಿ ಅದನ್ನು ನಾನು 69 ಕ್ಕೆ ಕನವರ್ಟ್ ಮಾಡಿದ್ದೇನೆ.

(ಗೊಂದಲ)

ಈ ನಡವಳಿಕೆಯು ಮಾನ್ಯ ಸಚಿವರಿಂದ ಪರಿಷ್ಕರಿಸಲ್ಪಟ್ಟಿದೆ

ದಯಮಾಡಿ ನನ್ನ ಮಾತನ್ನು ಕೇಳಿ, ನಿಯಮ 69 ರ ಕೆಳಗೆ ರೈಟ್‌ನೌ ಅವಕಾಶ ಕೊಡುತ್ತಿದ್ದೇನೆ. ದಯಾಡಿ ನನ್ನ ಮಾತು ಕೇಳಿ. ಈಗ ನಾನು 69ಕ್ಕೆ ರೈಟ್‌ನೌ ಚರ್ಚೆಗೆ ಅವಕಾಶ ಕೊಡುತ್ತಿದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಮಾನ್ಯ ವಿರೋಧ ಪಕ್ಷದ ನಾಯಕರು ವಿಷಯವನ್ನು ಪ್ರಸ್ತಾಪಿಸಿ ಇನ್ನೂ ಮುಕ್ತಾಯ ಮಾಡಿಲ್ಲ.

ಅಧ್ಯಕ್ಷರು :– ಇಲ್ಲಿ ಕೇಳಿ ಸ್ವಾಮಿ ಅನ್ನ ಆಗಿದೆ ಎಂದು ನೋಡುವುದಕ್ಕೆ ಒಂದು ಸಣ್ಣ ಅಗಳು ಸಾಕು. ನಿಮ್ಮ ನಾಯಕರು ಹೇಳುವುದೆಲ್ಲವನ್ನೂ ಹೇಳಿಬಿಟ್ಟಿದ್ದಾರೆ. ಆದುದರಿಂದ ಇದು ಇವತ್ತೇ ಬಹಳ ಮುಖ್ಯವಾದುದು ಎಂದು ನಾನು ನಿಯಮ 69ಕ್ಕೆ ಕನವರ್ಟ್ ಮಾಡಿ ಈಗಲೇ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ತಾವು ಮಾತನಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ತಾವು ಕನವರ್ಟ್ ಮಾಡಿ ಕೊಡಿ. ಆದರೆ ವಿರೋಧ ಪಕ್ಷದ ಶಾಸಕರಿಗೆ ಆದ್ಯತೆ ಸಿಗಬೇಕು. ಆಡಳಿತ ಪಕ್ಷದ ಸದಸ್ಯರಿಗೆ ತಮಗೆಲ್ಲಾ ಮಾತನಾಡುವುದು ಇದೆ ಎಂದು ಮಾತನಾಡಿದರೆ ಗೊಂದಲವಾಗುತ್ತದೆ.

ಅಧ್ಯಕ್ಷರು :– ಆಯಿತು ತಮಗೆಲ್ಲರಿಗೂ ಅವಕಾಶ ಕೊಡುತ್ತೇನೆ. ಟೈಂ ವೇಸ್ಟ್ ಮಾಡುವುದು ಬೇಡ ಮಾನ್ಯ ವಿರೋಧ ಪಕ್ಷದ ನಾಯಕರೇ ತಾವು ಮುಗಿಸಿಬಿಡಿ.

ಶ್ರೀ ಕೆ. ಶ್ರೀನಿವಾಸಗೌಡ :– ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುತ್ತಿದ್ದೆ.

ಅಧ್ಯಕ್ಷರು :– ಆಯಿತು ತಾವು ಮಾತನಾಡಿ ಏನು ಕ್ಲಾರಿಫಿಕೇಷನ್ ಕೊಡುತ್ತೀರಿ ಕೊಡಿ.

(x) ಶ್ರೀ ಕೆ. ಶ್ರೀನಿವಾಸಗೌಡ :– ಅವರು ಕೇಳಿದ್ದಕ್ಕೆ ನಾನು ಉತ್ತರ ಕೊಡಲಿಕ್ಕೆ ಇಚ್ಚಿಸುತ್ತೇನೆ. 25 ಭಾಗಕ್ಕೆ ಮತ್ತೆ ಬೇಕೆಂದು ಅನೇಕ ರೈತ ವರ್ಗದವರು ರೈತ ಮುಖಂಡರು, ಕೆಲವು ಶಾಸಕರು, ಕೆಲವು ಮಂತ್ರಿಗಳು, ಎಲ್ಲರೂ ಕೂಡ ಕೇಳಿದ್ದರಿಂದ ಮತ್ತೆ 25 ಭಾಗವನ್ನು ಕೊಡಬೇಕೆಂದು ತೀರ್ಮಾನವಾಗಿದೆ. ಅದು ಜೂನ್ ಒಂದರಿಂದಲೇ, ಎರಡು ಜಿಲ್ಲೆಗಳನ್ನು ಬಿಟ್ಟರೆ ಮೈಸೂರು, ಚಾಮರಾಜನಗರ ಈ ಎರಡು ಜಿಲ್ಲೆಗಳನ್ನು ಬಿಟ್ಟರೆ ಉಳಿದ ಜಿಲ್ಲೆಗಳಲ್ಲಿ ಹೆಚ್ಚಾಗಿ ಜೂನ್ ತಿಂಗಳಲ್ಲಿ ಬಿತ್ತನೆ ಆಗುವುದು. ಹಾಗಾಗಿ 50 ಪರ್ಸೆಂಟ್ ಸಬ್ಸಿಡಿಯನ್ನು ಕೊಟ್ಟಿದ್ದೇವೆ. ಯಾರು ಈ ಎರಡು ಜಿಲ್ಲೆ ಬಿಟ್ಟು ಅದಕ್ಕಿಂತ ಮೊದಲು ಮಾಡಿದ್ದಾರೆ ಅದು ಮೇ ಆಗಬಹುದು ಏಪ್ರಿಲ್ ಆಗಬಹುದು. ಅಂಥವರಿಗೆ

(x) ಈ ನಡವಳಿಕೆಯು ಮಾನ್ಯ ಸಚಿವರಿಂದ ಪರಿಷ್ಕರಿಸಲ್ಪಟ್ಟಿದೆ

ಅವರ ಹಣವನ್ನು ಅವರಿಗೇನು 25 ಭಾಗ ಹಣ ಕೊಡಬೇಕು ನಾವು ಕ್ರಾಸ್ಡ್ ಚೆಕ್ ಮೂಲಕ ಆ ರೈತನಿಗೆ ಕೊಡುತ್ತೇವೆ. ಇದು ಸರ್ಕಾರದ ತೀರ್ಮಾನ. ಇದನ್ನು ನಾವು ಅವತ್ತೇ ಮಾಡಲಿಲ್ಲ. ಇವತ್ತು ಮಾಡಲಿಲ್ಲ ಎಂದರೆ ಹೇಗೆ? ಹಾಗಾದರೆ ಅವರು ಕೂಡ ಆರು ವರ್ಷಗಳ ಕಾಲ ಸರ್ಕಾರ ನಡೆಸಿದರು. ಅಂತಹ ಬರ ಬಂದಂಥ ಸಮಯದಲ್ಲಿ ನಾಲ್ಕು ವರ್ಷಗಳ ಕಾಲ ಅವರೇ ಕೇಂದ್ರ ಸರ್ಕಾರ ನಡೆಸಿದಂಥ ಸಂದರ್ಭದಲ್ಲಿ ರೈತರಿಗೇನು ಕೊಟ್ಟರು? ಚರ್ಚೆ ಮಾಡೋಣ ಎಂದರೆ ಮುಂದಿನ ದಿನಗಳಲ್ಲಿ ಚರ್ಚೆ ಮಾಡೋಣ. ಆದರೆ ಕೊಟ್ಟಿರುವುದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ನಿಜವಾಗಲೂ ಕೂಡ ಇದನ್ನು ಪ್ರಶಂಸೆ ಮಾಡಬೇಕೆಂದು ತಮ್ಮ ಮೂಲಕ ನಾನು ಅವರನ್ನು ಕೇಳುತ್ತೇನೆ.

ಅಧ್ಯಕ್ಷರು :– ಮಾನ್ಯ ಯಡಿಯೂರಪ್ಪನವರೇ, ಮಾನ್ಯ ಹೆಚ್.ಕೆ. ಪಾಟೀಲ್‌ರವರು ಒಂದು ಹೇಳಿಕೆ ಮಂಡಿಸುತ್ತಾರಂತೆ ಅದಕ್ಕೆ ಅವಕಾಶ ಕೊಡಲಾ? ಮಾನ್ಯ ಪಾಟೀಲ್‌ರೇ, ತಾವು ಹೇಳಿಕೆ ಕೊಟ್ಟು ಬಿಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಮಧ್ಯದಲ್ಲಿ ಹೇಗೆ ಸಾರ್?

ಅಧ್ಯಕ್ಷರು :– ತಾಲ್ಲೂಕು ಪಂಚಾಯಿತಿ ಚುನಾವಣೆಯ ಬಗ್ಗೆ ನ್ಯಾಯಾಲಯದಿಂದ ಬಂದಂಥದ್ದರ ಬಗ್ಗೆ ಸ್ಟೇಟ್‌ಮೆಂಟ್ ಮಾಡುತ್ತಾರೆ ಮಾಡಲಿ ಬಿಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ :– ಅವರು ಸ್ಟೇಟ್‌ಮೆಂಟ್ ಮಾಡಿದಾಗ ನಾವು ಮಾತನಾಡಬೇಕಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ :– ಅವರು ಮಂಡಿಸಿದ ಮೇಲೆ ನಾವೂ ಕೂಡ ಹೇಳಬೇಕಾಗುತ್ತದೆ. ಈಗ ಒಂದು ವಿಷಯದ ಮೇಲೆ ಚರ್ಚೆ ನಡೆಯುತ್ತಿದೆ ಅದು ಮುಗಿಯಲಿ.